# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 218 |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ |
| ಉತ್ತರಿಸುವ ದಿನಾಂಕ | 14-09-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಡುವ ಹಾಗೂ ಪುರಾತತ್ವ ಇಲಾಖೆಯ ದೇವಸ್ಥಾನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಹೆಸರುಗಳೊಂದಿಗೆ ಇವುಗಳಿಂದ ಬರುತ್ತಿರುವ ಆದಾಯದ ಮಾಹಿತಿಯನ್ನು ನೀಡುವುದು. | ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಟ್ಟು 34,563 ಅಧಿಸೂಚಿತ ಸಂಸ್ಥೆಗಳು ಒಳಪಡುತ್ತವೆ. ಪ್ರವರ್ಗ `ಸಿ` ಅಧಿಸೂಚಿತ ಸಂಸ್ಥೆಗಳಿಗೆ ತಸ್ತೀಕ್ ಮತ್ತು ವರ್ಷಾಸನವನ್ನು ಹೊರತುಪಡಿಸಿ ಬೇರೆ ನಿರ್ದಿಷ್ಟ ಆದಾಯವಿರುವುದಿಲ್ಲ.<br>ಪುರಾತತ್ವ ಇಲಾಖೆಯ ಒಟ್ಟು 577 ದೇವಾಲಯಗಳು ರಾಜ್ಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿರುತ್ತದೆ. ಈ ದೇವಾಲಯಗಳಿಂದ ಪುರಾತತ್ವ ಇಲಾಖೆಯು ಯಾವುದೇ ಆದಾಯವನ್ನು ಪಡೆಯುವುದಿಲ್ಲ.<br>ಮುಜರಾಯಿ ಮತ್ತು ಪುರಾತತ್ವ ಇಲಾಖೆಯ ದೇವಾಲಯಗಳ ಜಿಲ್ಲಾವಾರು ಮಾಹಿತಿ ಮತ್ತು ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ `ಎ` ಮತ್ತು `ಬಿ` ದೇವಾಲಯಗಳ ಆದಾಯದ ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು. |
| ಆ) | ರಾಜ್ಯದಲ್ಲಿ ಈ ಪುರಾತತ್ತ್ವ ಇಲಾಖೆಗೆ ಒಳಪಡುವ ದೇವಾಲಯಗಳು ಸರಿಯಾದ ರಕ್ಷಣೆ ಕಾಮಗಾರಿಗಳು ಇಲ್ಲದೆ ಮಳೆ/ಗಾಳಿಯ ಒತ್ತಡಕ್ಕೆ ಸಿಕ್ಕಿಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;(ವಿವರ ನೀಡುವುದು) | ಬಂದಿದೆ.<br>ಆದ್ಯತೆ ಮೇರೆಗೆ ಕೈಗೊಳ್ಳಬೇಕಾಗಿರುವ ಇಂತರ ದೇವಾಲಯ/ಸ್ಮಾರಕಗಳ ಮಾಹಿತಿ ದೊರೆತ ಕೂಡಲೇ ಪುರಾತತ್ವ ಇಲಾಖೆಯ ಇಂಜಿನಿಯರ್ ವಿಭಾಗ ವತಿಯಿಂದ ಸ್ಥಳ ಪರಿಶೀಲಿಸಿ, ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಅವಶ್ಯಕತೆಗಳ ಅನುಗುಣವಾಗಿ ಅಂದಾಜನ್ನು ಸಿದ್ಧಪಡಿಸಲಾಗುತ್ತಿದೆ ಮತ್ತು ಸರ್ಕಾರದಿಂದ ವಾರ್ಷಿಕವಾಗಿ ಇಲಾಖೆಗೆ ನೀಡುವ ಅನುದಾನಕ್ಕನುಗುಣವಾಗಿ ಪುರಾತತ್ವ ಇಲಾಖೆಯ ಇಂತಹ ಸ್ಮಾರಕಗಳ ಸಂರಕ್ಷಣೆಯ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೊಳಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ. ಈ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆಯಾದ ನಂತರ ಈ ಸ್ಮಾರಕ/ದೇವಾಲಯ ಸಂರಕ್ಷಣೆಗೆ ಇಲಾಖೆಯು ನಿಯಮಾನುಸಾರ ಕ್ರಮವಹಿಸುತ್ತದೆ. |
| ಇ) | ಈ ದೇವಸ್ಥಾನಗಳನ್ನು ಜೀರ್ಣೋದ್ಧಾರಗೊಳಿಸಲು ಇರುವ ಮಾನದಂಡಗಳೇನು ಮತ್ತು ಕಳೆದ ಐದು ವರ್ಷಗಳಿಂದ ಪುನರುಜ್ಜೀವನಗೊಳಿಸಲಾಗಿರುವ ಪುರಾತತ್ವ ಇಲಾಖೆಗೆ ಸೇರಿರುವ ದೇವಸ್ಥಾನಗಳು ಎಷ್ಟು; ಇದಕ್ಕೆ ನೀಡಿರುವ ಅನುದಾನ ಎಷ್ಟು;(ಮಾಹಿತಿ ನೀಡುವುದು) | ಸ್ಮಾರಕ ವಾಸ್ತುಶಿಲ್ಪ ಮತ್ತು ರಚನೆ ಹಾಗೂ ಐತಿಹಾಸಿಕ ಮಹತ್ವದ ಅನುಗುಣವಾಗಿ ಸ್ಮಾರಕದ ಮೂಲಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ದುರಸ್ಥಿಯನ್ನು ಮಾಡುವ ಮೂಲಕ ಸ್ಮಾರಕ/ದೇವಾಲಯಗಳನ್ನು ಅದರ ಪೂರ್ವಸ್ಥಿತಿಗೆ ತರುವುದು ಸಂರಕ್ಷಣೆಯ ಮೂಲತತ್ವವಾಗಿದೆ. |

......2

| | | |
|---|---|---|
| | | ಕಳೆದ ಐದು ವರ್ಷಗಳಲ್ಲಿ ಪುರಾತತ್ವ ಇಲಾಖೆಯ ವತಿಯಿಂದ ಒಟ್ಟಾರೆ 152 ದೇವಾಲಯಗಳ ಸಂರಕ್ಷಣೆಗೆ ರೂ.3233.22ಲಕ್ಷಗಳ ಅನುದಾನವನ್ನು ನೀಡಲಾಗಿದೆ.<br><br>ಮುಜರಾಯಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯು ಸಹ ಕೆಲವು ಆಯ್ದ ದೇವಾಲಯ/ಸ್ಮಾರಕಗಳ ಸಂರಕ್ಷಣೆಗೆ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಇದರನ್ವಯ ಇಂತಹ ಸ್ಮಾರಕಗಳ ಸಂರಕ್ಷಣೆಗೆ ಇಲಾಖೆಯು ನಿಯಮಾನುಸಾರ ಕ್ರಮವಹಿಸುತ್ತಿದೆ.<br><br>**ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಸ್ಮಾರಕಗಳ ಸಂರಕ್ಷಣೆಗೆ ಅನುದಾನ:-**<br>ಸರ್ಕಾರಿ ಆದೇಶ ಸಂಖ್ಯೆ: ಕಂಇ 97 ಕೆಎಂಯು 2001 ದಿನಾಂಕ:19-11-2001ರನ್ವಯ 2002-03ನೇ ಸಾಲಿನಿಂದ ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಯೋಗದೊಡನೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಪೂಜೆಗೊಳ್ಳುವ ದೇವಾಲಯಗಳ ಸಂರಕ್ಷಣೆಯನ್ನು ಕೈಗೊಂಡು ಬರಲಾಗುತ್ತಿದೆ. ಈ ಯೋಜನೆಯಡಿ ಅಂದಾಜು ವೆಚ್ಚ 40:40:20 ಅನುಪಾತದಲ್ಲಿ (ಸರ್ಕಾರ : ಖಾಸಗಿ : ಸಾರ್ವಜನಿಕ) ಭರಿಸಲಾಗುತ್ತಿದೆ.<br><br>ಈ ಯೋಜನೆಯಡಿ 2002ರಿಂದ ಈವರೆವಿಗೆ ಒಟ್ಟು 180 ಪೂಜೆಗೊಳ್ಳುವ ದೇವಾಲಯಗಳ ಸಂರಕ್ಷಣಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆ. ಈ ಕಾಮಗಾರಿಗಳಿಗೆ ಈವರೆವಿಗೆ ಸರ್ಕಾರದಿಂದ ಶೇ.40%ರ ಅನುಪಾತದಡಿ ರೂ.10.71ಕೋಟಿ ಅನುದಾನವನ್ನು ನೀಡಲಾಗಿದೆ.<br><br>ಖಾಸಗಿ ವ್ಯಕ್ತಿಗಳು ಸ್ಮಾರಕಗಳ ದತ್ತು ತೆಗೆದುಕೊಂಡು ಸ್ಮಾರಕಗಳ ಸಂರಕ್ಷಣೆ:- ಐತಿಹಾಸಿಕ ದೇವಾಲಯ/ ಸ್ಮಾರಕಗಳ ಸಂರಕ್ಷಣಾ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಆಸಕ್ತ ಖಾಸಗಿ ವ್ಯಕ್ತಿಗಳೂ ಕೂಡ ನಿಯಮಗಳನ್ನು ಅನುಸರಿಸಿದ ನಂತರ ಈ ಕಾರ್ಯವನ್ನು ಕೈಗೊಳ್ಳಲು ಒಡಂಬಡಿಕೆಯನ್ನು ಮಾಡಿಕೊಂಡು ಅವಕಾಶ ಮಾಡಿಕೊಡಲಾಗುತ್ತಿದೆ. |
| ಈ | ಪುರಾತನ ಕಾಲದ ಈ ದೇವಾಲಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಪ್ರತಿ ವರ್ಷವು ಪುರಾತತ್ವ ಇಲಾಖೆಗೆ ಹಣ ಮಂಜೂರು ಮಾಡಿ ಈ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?(ವಿವರ ನೀಡುವುದು) | ಇಲಾಖೆಯ ಆಯವ್ಯಯಕ್ಕೆ ನೀಡಲಾಗುವ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರತಿ ಆರ್ಥಿಕ ಸಾಲಿನಲ್ಲಿಯೂ ಪುರಾತತ್ವ ಇಲಾಖೆಗೆ ಅನುದಾನವನ್ನು ನೀಡಲಾಗುತ್ತಿದೆ. |

ಸಂಖ್ಯೆ: ಕಂಇ 151 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು